ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿ ವಿಚಾರಣೆ ಒಳಪಟ್ಟಿದ್ದು, ಅವರನ್ನು ಪಿಡಬ್ಲೂ-1 ಎಂದು ಪರಿಗಣಿಸಿ ಇಂದು ದಿನಾಂಕಃ 13.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ವಾದಿಯ ಪರ ಶ್ರೀ ಡಿ ಎಸ್ ಪಿ ವಕೀಲರಿಂದಃ

ನಾನು ನನ್ನ ಮುಖಿಕ ವಿಚಾರಣೆಯ ಬದಲಾಗಿ ನನ್ನ ಮುಖ್ಯ ವಿಚಾರಣಾ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲ ಅಂಶಗಳು ನಿಜವಿರುತ್ತವೆ ಮತ್ತು ಅವುಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಹಿಗಳು ನನ್ನದೇ ಇರುತ್ತವೆ. ಮುಂದುವರೆದು ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನನ್ನ ಪರವಾಗಿ ಗುರುತಿಸಬೇಕೆಂದು ಕೋರುತ್ತೇನೆ .

| ಕ್ರ.ಸಂಖ್ಯೆಃ | ಹಾಜರುಪಡಿಸಿದ ದಾಖಲಾತಿಗಳು | ನಿಶಾನಿಸಲ್ಪಟ್ಟ ಸಂಖ್ಯೆಗಳು |
|---|---|---|
| 1. | ಸರ್ವೆನಂ. 233/2 ಅ/2 ಪ್ಲಾಟ್ ನಂ. 2 ರ ದೃಡೀಕೃತ ನಕಲು ಆರ್ ಟಿ ಸಿ ಯನ್ನು ಹಾಜರಪಡಿಸಿದ್ದು ಅದನ್ನು | ನಿಪಿ-1 |
| 2. | ಡ.ನಂ.3897 ರ ದೃಡೀಕೃತ ನಕಲು ಪ್ರತಿಯನ್ನು ಹಾಜರಪಡಿಸಿದ್ದು ಅದನ್ನು | ನಿಪಿ-2 |
| 3. | 1 ನೇ ಪ್ರತಿವಾದಿ ತಹಶೀಲ್ದಾರ ರವರಿಗೆ ಅರ್ಜಿಯ ದೃಡೀಕೃತ ನಕಲು ಪ್ರತಿಯನ್ನು ಹಾಜರಪಡಿಸಿದ್ದು ಅದನ್ನು | ನಿಪಿ-3 |
| 4. | 1 ನೇ ಪ್ರತಿವಾದಿ ಅರ್ಜಿಯ ಮೇಲೆ ತಹಶೀಲ್ದಾರ ಹಿರೇಕರೂರು ರವರು ಮಾಡಿದ ಆದೇಶದ ದೃಡೀಕೃತ ನಕಲು ಪ್ರತಿಯನ್ನು ಹಾಜರಪಡಿಸಿದ್ದು ಅದನ್ನು | ನಿಪಿ-4 |
| 5. | ನನ್ನ ತಂದೆಯ ಮರಣ ಪ್ರಮಾಣ ಪತ್ರದ ದೃಡೀಕೃತ ನಕಲು ಪ್ರತಿಯನ್ನು ಹಾಜರಪಡಿಸಿದ್ದು ಅದನ್ನು | ನಿಪಿ-5 |

| | | |
|---|---|---|
| 6. | ನಮ್ಮ ವಕೀಲರು ಪ್ರತಿವಾದಿಯರಿಗೆ ನೀಡಿದ ನೋಟಿಸನ ಪ್ರತಿಯನ್ನು ಹಾಜರಪಡಿಸಿದ್ದು ಅದನ್ನು | ನಿಪಿ–6 |
| 7. | 3 ಅಂಚೆ ಸ್ವೀಕೃತಿಗಳನ್ನು ಅವುಗಳನ್ನು | ನಿಪಿ–7 ರಿಂದ 9 |
| 8. | ಪ್ರತಿವಾದಿಯರು ನೀಡಿದ ಉತ್ತರ ನೋಟಿಸನ್ನು ಹಾಜರಪಡಿಸಿದ್ದು ಅದನ್ನು | ನಿಪಿ–10 |

(ಮುಂದುವರೆದ ಮುಖ್ಯ ವಿಚಾರಣೆಗೆ ವಕೀಲರು ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.